ಮತ್ತೆ ಚೇತನ್‌ನೇ ಮುಂದುವರೆದ. 'ನಿಮಗೆ ಎಲ್ಲವೂ ನಿಗದಿತ ಸಮಯಕ್ಕೆ ಆಗಿದೆ. ಈಗ ಒಂದು ಸೈಟು ಕೊಳ್ಳುವ ಬರೀ ಒಂದೇ ಕೆಲಸ ಬಾಕಿ ಉಳಿದಿರುವುದು. ನಮ್ಮ ಕಂಪೆನಿಯ ಹಿಡಿತದಲ್ಲಿ ನಾಲ್ಕು ಸೈಟುಗಳಿವೆ. ನೀವು ಇಷ್ಟಪಟ್ಟರೆ ಇಂದೇ ನೀವು ಒಂದು ಸೈಟಿನ ಮಾಲೀಕರಾಗುತ್ತೀರಿ.' 'ಹೌದೇ? ಎಲ್ಲಿದೆ ಅದು?' 'ಬೆಂಗಳೂರಿನಲ್ಲಿ.' 'ಬೆಂಗಳೂರಿನಲ್ಲಾದರೆ ನಮಗೆ ಕಷ್ಟವೇ.' 'ಯಾಕೆ ಕಷ್ಟ? ಮುಂದೆ ಮಗ ಎಂಜಿನಿಯರೋ ಡಾಕ್ಟರೋ ಆದರೆ ಅಲ್ಲಿಯೇ ಸೈಟು ಬೇಕಲ್ಲವೇ.' 'ಅರೆ, ಯಾರು ಹೇಳಿದರು ಅವ ಎಂಜಿನಿಯರ್ ಡಾಕ್ಟ್ರು ಆಗ್ತಾನೆ ಅಂತ?' 'ಯಾರು ಯಾಕೆ ಹೇಳ್ಬೇಕು ಸಾರ, ನಿಮ್ಮನ್ನು ನೋಡಿದರೆ ಗೊತ್ತಾಗತ್ತೆ, ನಿಮ್ಮ ಮನೆಯವರ ಸ್ಪಂದನೆ ನೋಡಿದರೆ ಗೊತ್ತಾಗತ್ತೆ, ನಿಮ್ಮ ಮಗ ದೊಡ್ಡ ಹುದ್ದೆಗೆ ಹೋಗಲೇಬೇಕು.' 'ಆದರೂ ಅವನಿಗೆ ಅಂತ ಈಗಲೇ ಅಲ್ಲಿ ಸೈಟು ಖರೀದಿಸಿಡುವಷ್ಟು ನನ್ನ ಬಳಿ ಬಜೆಟ್ ಇಲ್ಲ, ಮತ್ತು ಹಾಗೆ ಮಾಡುವುದರಲ್ಲಿ ಅರ್ಥವೇನಿದೆ?' 'ಇರಲಿ ಬಿಡಿ ಸಾರ್ ಒಂದು ಸೈಟು, ಇಷ್ಟು ಸೋವಿ ರೇಟಿಗೆ ಇಷ್ಟು ಸುಲಭಕ್ಕೆ ನಿಮಗೆ ಎಲ್ಲಿಯೂ ಸಿಗುವುದಿಲ್ಲ, ನೋಡಿ ಇಲ್ಲಿ ಕೂತ ಹದಿಮೂರು ಜೋಡಿಗಳಲ್ಲಿ ಯಾರಾದರೂ ನಾಲ್ವರು ತೊಗೊಂಡುಬಿಟ್ಟರೆ, ಆಮೇಲೆ ನೀವು ಎಷ್ಟು ಬೇಸರಪಟ್ಟರೂ ಅದು ಸಿಗುವುದಿಲ್ಲ. ದೊಡ್ಡ ಮನಸ್ಸು ಮಾಡಿ ಸಾರ್' 'ಹೌದೇ, ಇಷ್ಟು ಒತ್ತಾಯ ಮಾಡುತ್ತೀರೆಂದರೆ ತೋರಿಸಿ ನೋಡ್ವಾ, ಯಾವ ಏರಿಯಾ, ಎಷ್ಟು ದರ ಅಂತಲಾದರೂ ತಿಳಿಸಿ.' ಆ ತರುಣ ಅತ್ಯುತ್ಸಾಹದಲ್ಲಿ ಕೈಯಲ್ಲಿದ್ದ ಫೈಲ್ ತೆರೆದು 'ನೋಡಿ ಸಾರ್, ದೇವನಹಳ್ಳಿಯ ವಿಮಾನ ನಿಲ್ದಾಣದ ಹತ್ತಿರ ಇರುವ ಸೈಟು, ತುಂಬಾ ಬೆಲೆ ಬಾಳುವ ಸೈಟು. ಅವರಿಗೆ ಏನೋ ಸ್ವಲ್ಪ ಹಣದ ತೊಂದರೆಯಿಂದ ಇದನ್ನು ಮಾರುತ್ತಿದ್ದಾರೆ.' 'ಹೌದೇ, ಎಷ್ಟಿದೆ ಅಳತೆ?' 'ನಲವತ್ತು ಬಾಯ್ ಮೂವತ್ತರ ಎರಡು, ಐವತ್ತು ಬಾಯ್ ಮೂವತ್ತರ ಎರಡು ಸೈಟುಗಳು' ಅನ್ನುತ್ತ ಕಾಗದದ ಮಡಿಕೆ ಬಿಚ್ಚಿ ಅದರ ನಕಾಶೆಯಲ್ಲಿ ಕೈ ಬೆರಳಾಡಿಸಿ ತೋರಿಸಲಾರಂಭಿಸಿದ.

'ಅಲ್ಲ, ನೀವು ನಮಗೆ ಕರೆದದ್ದು ಗಿಫ್ಟ್ ಕೊಡುತ್ತೇವೆ ಬನ್ನಿ ಅಂತ. ಇಲ್ಲಿ ನಡೆಯುತ್ತಿರೋದು ಏನು?' ಎಂಬ ರೀತಿಯಲ್ಲಿ ವಿಶ್ವನಾಥ ಬೇಸರ ವ್ಯಕ್ತಪಡಿಸಿದ್ದಕ್ಕೆ, 'ನೋಡಿ ಸಾರ್, ಇಂಥ ಸೈಟು ನಿಮಗೆ ಜೀವಮಾನದಲ್ಲಿ ಸಿಗುವದಿಲ್ಲ, ಮ್ಯಾಡಂ ನೀವಾದರೂ ಸ್ವಲ್ಪ ಹೇಳಿ' ಅನ್ನುತ್ತ ಚೇತನ್ ದುಂಬಾಲು ಬಿದ್ದ. 'ಹೋಗಲಿ, ರೇಟೆಸ್ಟು?' 'ಮೂವತ್ತು ನಲವತ್ತರ ಸೈಟಿಗೆ ಕೇವಲ ಹನ್ನೆರಡು ಲಕ್ಷ, ಈಗಲೇ ಎಲ್ಲ ಕಟ್ಟಿಬಿಡುವುದಲ್ಲ, ಅಡ್ವಾನ್ಸ್ ಅಂತ ಕೇವಲ ಇಪ್ಪತ್ತು ಸಾವಿರ ಕಟ್ಟಿದರೆ ಆಯಿತು.' 'ಉಳಿದದ್ದು?' 'ಕಂತಿನ ಮೇಲೆ ಒಂದೊಂದೇ ಲಕ್ಷ ತುಂಬುವದು.' ಪಕ್ಕದ ಟೇಬಲ್ಲಿನಲ್ಲಿ ಎಂಥದೋ ಗದ್ದಲ ಕೇಳಿತು. ಅದೇನು ಅಂತ ಎಲ್ಲರೂ ಅತ್ತ ಲಕ್ಷ್ಯ ಕೊಟ್ಟರು.

ಆ ಟೇಬಲ್ಲಿನ ಯುವಕ ಎದ್ದು ನಿಂತು 'ನೋಡಿ ಈ ರೇವಣ್ಕರ್ ದಂಪತಿ ಸೈಟ್ ಬುಕ್ ಮಾಡಿದ್ದಾರೆ ಇಪ್ಪತ್ತು ಸಾವಿರದ ಚೆಕ್ ನೀಡಿ' ಎನ್ನುತ್ತ ಚೆಕ್ಕನ್ನು ಎತ್ತಿ ತೋರಿಸಿದ. ಅವರನ್ನು ಎದ್ದು ನಿಲ್ಲಿಸಿ ಎಲ್ಲರಿಂದ ಅಭಿನಂದನಾಪೂರ್ವಕ ಚಪ್ಪಾಳೆ ಹೊಡೆಸಿದ. ಎಲ್ಲ ಟೇಬಲ್ಲಿನ ದಂಪತಿಗಳು ಆ ದಂಪತಿಯನ್ನು ಸ್ವಲ್ಪ ಅಸೂಯೆಯ ದೃಷ್ಟಿಯಿಂದ ನೋಡಿ ಪುನಃ ಮಾತಿಗೆ ಕುಳಿತರು. 'ನೋಡಿ ಮ್ಯಾಡಂ, ಈಗ ಉಳಿದಿರೋದು ಬರೀ ಮೂರೇ ಮೂರು ಸೈಟುಗಳು, ನೀವು ಈಗಲೇ ಮನಸ್ಸು ಮಾಡದಿದ್ದರೆ ಅದು ಬೇರೆಯವರ ಪಾಲಾಗುತ್ತದೆ. ಬರೀ ಹತ್ತು ಲಕ್ಷಕ್ಕೆ ಅದೂ ಬೆಂಗಳೂರಿನಂಥ ಕಡೆಯಲ್ಲಿ ಸೈಟುಗಳು ಸಿಗುವುದೇ ಇಲ್ಲ.' ವಿಶ್ವನಾಥನಿಗೆ ಒಮ್ಮೆಲೇ ತಲೆ ಗಿರಿಕ್ ಅಂತು. 'ನಿಮಗೇನು ತಲೆಗಿಲೆ ಕೆಟ್ಟಿದೆಯೇನ್ರೀ, ನಾವು ಇಲ್ಲಿಯವರು, ಬೆಂಗಳೂರಿನಲ್ಲಿ ಯಾಕೆ